RNI: KNKAN/ 25/A5387 | ಸಂಪಾದಕರು: ರಾಜೇಶ್ವರಿ ಎನ್. ಓಲೇಕಾರ | ಸಿಇಒ: ಚಂದ್ರಶೇಖರ ಎನ್.ಕೆ. | ಸಹ ಸಂಪಾದಕರು: ಶಿವಕುಮಾರ

ಸಮಾಲೋಚನೆ ಸುದ್ದಿ

ಕನ್ನಡ ದಿನ ಪತ್ರಿಕೆ

ನೇರ ನಿಖರ ನಿರ್ದಿಷ್ಟ

ಸಂಪುಟ (Volume): 1 ಸಂಚಿಕೆ (Issue): 222 ಪುಟ (Page): 4 ದರ Rs. 2 ಸೋಮವಾರ 9 ನವೆಂಬರ್ 2026 ● 9 NOVEMBER 2026 ಹಾವೇರಿ ಧಾರವಾಡ ಗದಗ ಕೊಪ್ಪಳ ವಿಜಯನಗರ ಬೆಳಗಾವಿ ಉತ್ತರ ಕನ್ನಡ samalochanersuddi@gmail.com

ಮೊ.ನಂ: 8095203132 PMG/KA/NK/HVR-59/2026-28 SAMALOCHANE RANEBENNURSUDDI Kannada Daily Morning

ಕರ್ನಾಟಕದಲ್ಲಿ ದೀಪಾವಳಿ ಸಂಭ್ರಮ ಬೆಳಕು, ಸಂತಸದ ಮಹೋತ್ಸವ



ದೀಪಾವಳಿ ಸಂಭ್ರಮದ ಪ್ರಭಾವಳಿ

ಬೆಳಕಿನ ಹಬ್ಬವಾದ ದೀಪಾವಳಿಯು ಭಾರತದಾದ್ಯಂತ ಸಂತೋಷ, ಭಕ್ತಿ ಮತ್ತು ಸಾಂಸ್ಕೃತಿಕ ಸಾಮರಸ್ಯವನ್ನು ಪಸರಿಸುತ್ತದೆ. ಕರ್ನಾಟಕದಲ್ಲಿ, ಇದನ್ನು "ದೀಪಗಳ ಸಾಲು" ಎಂಬ ಅರ್ಥವನ್ನು ನೀಡುವ ದೀಪಾವಳಿ ಎಂದೇ ಕರೆಯಲಾಗುತ್ತದೆ. ಈ ಭವ್ಯ ಹಬ್ಬವು ಕೆಡುಕಿನ ಮೇಲೆ ಒಳ್ಳೆಯತನದ ವಿಜಯವನ್ನು ಸಂಕೇತಿಸುತ್ತದೆ ಮತ್ತು ನಮ್ಮ ರಾಜ್ಯವನ್ನು ಸಂಭ್ರಮ, ವಿಶ್ವಾಸ ಮತ್ತು ಕೌಟುಂಬಿಕ ಬಾಂಧವ್ಯದ ಉತ್ಸಾಹದಿಂದ ತುಂಬುತ್ತದೆ.

ದೀಪಾವಳಿಯ ಮಹತ್ವ: ಭಾರತದಾದ್ಯಂತ ದೀಪಾವಳಿಯ ಸಂಪ್ರದಾಯಗಳು ಭಿನ್ನವಾಗಿದ್ದರೂ, ಕತ್ತಲೆಯ ಮೇಲೆ ಬೆಳಕು ಸಾಧಿಸಿದ ವಿಜಯದ ಮೂಲಭೂತ ಸಾರವು ಒಂದೇ ಆಗಿರುತ್ತದೆ. ಉತ್ತರ ಭಾರತದಲ್ಲಿ, ಇದು ರಾವಣನ ಮೇಲಿನ ವಿಜಯದ ನಂತರ ಶ್ರೀರಾಮನು ಮನೆಗೆ ಹಿಂದಿರುಗಿದ ದಿನವನ್ನು ಸ್ಮರಿಸುತ್ತದೆ; ಅದೇ ರೀತಿ ದಕ್ಷಿಣ ಭಾರತದಲ್ಲಿ, ಇದು ನರಕಾಸುರನೆಂಬ ರಾಕ್ಷಸನ ಮೇಲೆ ಶ್ರೀ ಕೃಷ್ಣನು ಸಾಧಿಸಿದ ವಿಜಯದ ಪ್ರತೀಕವಾಗಿದೆ. ಇದರೊಂದಿಗೆ, ದಕ್ಷಿಣದ ಹಲವು ಭಾಗಗಳಲ್ಲಿ ಚಕ್ರವರ್ತಿ ಬಲಿಗಾಗಿ ಶ್ರೀ ಮಹಾವಿಷ್ಣುವು ಸಾಧಿಸಿದ ವಿಜಯವನ್ನು ಗೌರವಿಸಲಾಗುತ್ತದೆ.

ಆಸಕ್ತಿದಾಯಕ ಆಚರಣೆಗಳು

ಗ್ರಾಮೀಣ ಕರ್ನಾಟಕದಲ್ಲಿ, ಕೇವಲ ಲಕ್ಷ್ಮಿ ಪೂಜೆಯ ಹೊರತಾಗಿ ಸಾಂಸ್ಕೃತಿಕ ಕಾರ್ಯಕ್ರಮಗಳು ಮತ್ತು ಸ್ಪರ್ಧೆಗಳಂತಹ ಹಲವು ಆಸಕ್ತಿದಾಯಕ ಆಚರಣೆಗಳು ಈ ಹಬ್ಬವನ್ನು ಇನ್ನಷ್ಟು ಸುಂದರವಾಗಿಸುತ್ತವೆ. ನಗರ ಪ್ರದೇಶಗಳಲ್ಲಿ, ದೀಪಾವಳಿಯು ಮಹಾಲಕ್ಷ್ಮಿ ಮತ್ತು ವಿಷ್ಣು ದೇವರ ಪೂಜೆಯ ಸುತ್ತ ಸುತ್ತುತ್ತದೆ. ಸಂಪತ್ತು ಮತ್ತು ಸಮೃದ್ಧಿಗಾಗಿ ಲಕ್ಷ್ಮಿಯನ್ನು ಆರಾಧಿಸಿದರೆ, ಬಲಿಯ ಮೇಲಿನ ಜಯಕ್ಕಾಗಿ ವಿಷ್ಣುವನ್ನು ಪೂಜಿಸಲಾಗುತ್ತದೆ. ಜನರು ಹಬ್ಬದ ಆಚರಣೆಗಾಗಿ ತಮ್ಮ ಮನೆಗಳನ್ನು ದೀಪಗಳು, ಹೂವಿನ ತೋರಣಗಳು ಮತ್ತು ರಂಗೋಲಿಗಳಿಂದ ಅಲಂಕರಿಸುತ್ತಾರೆ. ಅಲ್ಲದೆ, ಕಡಿಮೆ ಅದೃಷ್ಟವಂತರಿಗೆ ಮತ್ತು ನಿರ್ಗತಿಕರಿಗೆ ದಾನ ನೀಡುವುದರ ಮೂಲಕವೂ ಹಬ್ಬವನ್ನು ಆಚರಿಸುತ್ತಾರೆ. ಜನರು ವರ್ಣರಂಜಿತ ಸಾಂಪ್ರದಾಯಿಕ ಉಡುಗೆಗಳನ್ನು ಧರಿಸಿ, ಮೈಸೂರು ಪಾಕ್ ಮತ್ತು ಧಾರವಾಡ ಪೇಡಾದಂತಹ ಸಿಹಿತಿಂಡಿಗಳನ್ನು ವಿನಿಮಯ ಮಾಡಿಕೊಳ್ಳುತ್ತಾರೆ ಮತ್ತು ಪ್ರೀತಿಪಾತ್ರರೊಂದಿಗೆ ಸಮಯ ಕಳೆಯುತ್ತಾರೆ. ಪಟಾಕಿಗಳನ್ನು ಸಿಡಿಸುವುದು ಮತ್ತು ಎಣ್ಣೆ ದೀಪಗಳನ್ನು ಬೆಳಗಿಸುವುದು ಪ್ರತಿ ಮನೆ ಮತ್ತು ಬೀದಿಗೆ ಹೊಳಪು ಹಾಗೂ ಉತ್ಸಾಹವನ್ನು ತರುತ್ತದೆ.

ಕರ್ನಾಟಕದಲ್ಲಿ ದೀಪಾವಳಿಯ ಅನುಭವ

ಅದು ಬೆಂಗಳೂರಿನಲ್ಲಿರುವ ಮಿನುಗುವ ಸಂಭ್ರಮವಾಗಲಿ, ಮೈಸೂರಿನಲ್ಲಿರುವ ಸಾಂಪ್ರದಾಯಿಕ ವಿಧಿವಿಧಾನಗಳಾಗಲಿ ಅಥವಾ ಕರಾವಳಿ ಪಟ್ಟಣಗಳಲ್ಲಿರುವ ಕಡಲ ತೀರದ ಹಬ್ಬದ ವಾತಾವರಣವಾಗಲಿ, ದೀಪಾವಳಿಯ ಸಮಯದಲ್ಲಿ ಕರ್ನಾಟಕದ ಪ್ರತಿ ಮೂಲೆ ಮೂಲೆಗಳೂ ಹಬ್ಬದ ಉಲ್ಲಾಸದಿಂದ ಪ್ರಜ್ವಲಿಸುತ್ತದೆ. ಈ ಆಚರಣೆಯು ಕೇವಲ ವಿಧಿಗಳನ್ನು ಮೀರಿದ್ದು, ಅದು ಸಂತೋಷ, ಒಗ್ಗಟ್ಟು ಮತ್ತು ಆಧ್ಯಾತ್ಮಿಕ ನವೀಕರಣದ ಒಂದು ಸುಂದರ ಅನುಭವವಾಗಿದೆ.

ಐದು ದಿನಗಳ ಆಚರಣೆಗಳು

*ಮೊದಲ ದಿನ (ಧನತೇರಸ್ / ನೀರು ತುಂಬುವ ಹಬ್ಬ): ಸಮೃದ್ಧಿಗಾಗಿ ಚಿನ್ನ, ಪಾತ್ರೆಗಳು ಅಥವಾ ಹೊಸ ವಸ್ತುಗಳನ್ನು ಖರೀದಿಸುವುದು ಹಾಗೂ ಧನ್ವಂತರಿ ಪೂಜೆ ಮತ್ತು ಲಕ್ಷ್ಮಿ–ಗಣೇಶ ಪೂಜೆ ಮಾಡಲಾಗುತ್ತದೆ.

*ಎರಡನೇ ದಿನ (ನರಕ ಚತುರ್ದಶಿ): ಶ್ರೀಕೃಷ್ಣನು ನರಕಾಸುರನನ್ನು ವಧಿಸಿದ ದಿನವಾಗಿ ಇದನ್ನು ಆಚರಿಸಲಾಗುತ್ತದೆ. ಬೆಳಗ್ಗೆ ಎಣ್ಣೆ ಸ್ನಾನ ಮಾಡಿ, ಹೊಸ ಬಟ್ಟೆ ಧರಿಸಿ, ದೀಪಗಳನ್ನು ಹಚ್ಚಿ ಪಟಾಕಿ ಸಿಡಿಸಲಾಗುತ್ತದೆ.

*ಮೂರನೇ ದಿನ (ಅಮಾವಾಸ್ಯೆ / ಲಕ್ಷ್ಮಿ ಪೂಜೆ): ಹಬ್ಬದ ಮುಖ್ಯ ದಿನ. ಮನೆಯಲ್ಲಿ ಲಕ್ಷ್ಮಿ ಮತ್ತು ಗಣೇಶನನ್ನು ಪೂಜಿಸಲಾಗುತ್ತದೆ. ವಿಶೇಷ ಸಿಹಿ ತಿಂಡಿಗಳು ಮತ್ತು ದೀಪಗಳ ಅಲಂಕಾರವಿರುತ್ತದೆ. ದಕ್ಷಿಣ ಭಾರತದಲ್ಲಿ ಹಾಗೂ ಕರ್ನಾಟಕದಲ್ಲಿ ಈ ದಿನ ವಿಶೇಷ ಮಹತ್ವ ಪಡೆದಿದೆ.

*ನಾಲ್ಕನೇ ದಿನ (ಬಲಿ ಪಾಡ್ಯಮಿ): ಬಲಿ ಚಕ್ರವರ್ತಿ ಮತ್ತು ವಾಮನ ಅವತಾರದ ಕಥೆ ಹಾಗೂ ಗೋವರ್ಧನ ಪೂಜೆ, ಗೋಮಾತೆ ಪೂಜೆ ನಡೆಸಲಾಗುತ್ತದೆ.

*ಐದನೇ ದಿನ (ಸೋದರ ಬಿಳಿಗೆ / ಯಮದ್ವಿತೀಯ): ಸಹೋದರ–ಸಹೋದರಿಯರ ಬಾಂಧವ್ಯದ ಪ್ರತೀಕ. ಸಹೋದರಿಯರು ತಮ್ಮ ಸಹೋದರರನ್ನು ಆಹ್ವಾನಿಸಿ ಆರತಿ ಮಾಡಿ ಉಪಚರಿಸುತ್ತಾರೆ.

ಪುಟ–4...



ಸಮಾಲೋಚನೆ ಸುದ್ದಿ
ದಿನಪತ್ರಿಕೆ
SAMALOCHANE RANEBENNURSUDDI
Kannada Daily Morning












ನಾಡಿನ ಜನತೆಗೆ ಹಾಗೂ ರಾಣೆಬೆನ್ನೂರ
ತಾಲೂಕಿನ ಜನತೆಗೆ ಬೆಳಕಿನ ಹಬ್ಬವಾದ
ದೀಪಾವಳಿ ಹಬ್ಬದ
ಶುಭಾಶಯಗಳು
ಶುಭಕೋರುವವರು
ಅನಂತ ಇಟಗಿ.
ಬಿಜೆಪಿ ಯುವ ಮುಖಂಡರು ಹಾಗೂ
ಕರೂರ ಜಿಪಂ ಕ್ಷೇತ್ರದ ಪ್ರಬಲ ಆಕಾಂಕ್ಷಿಗಳು


ಮಣ್ಣಿನ ಹಣತೆಯಲ್ಲಿ
ಉರಿಯುವ ಬೆಳಕಿನಂತೇ
ನಿಮ್ಮ ಬದುಕು ಬೆಳಗಲಿ.
ರಾಣೆಬೆನ್ನೂರ ತಾಲೂಕಿನ
ಸಮಸ್ತ ನಾಗರೀಕರಿಗೆ
ಬೆಳಕಿನ ಹಬ್ಬ
ದೀಪಾವಳಿ
ಶುಭಾಶಯಗಳು!
ಶುಭಕೋರುವವರು.
ಸುರೇಶ ಬೀರಾಳ
ಕಾಂಗ್ರೆಸ್ ಮುಖಂಡರು ಹಾಗೂ
ಕರೂರ ಜಿಪಂ ಕ್ಷೇತ್ರದ ಕಾಂಗ್ರೆಸ್
ಪಕ್ಷದ ಪ್ರಬಲ ಆಕಾಂಕ್ಷಿಗಳು.


ನಾಡಿನ ಜನತೆಗೆ ಹಾಗೂ ಸಮಸ್ತ ಜನರಿಗೆ
ಬೆಳಕಿನ ಹಬ್ಬವಾದ
ದೀಪಾವಳಿಯ
ಶುಭಾಶಯಗಳು
"ಪ್ರತಿಯೊಂದು ಕುಟುಂಬದಲ್ಲೂ ಸುಖ-ಸಮೃದ್ಧಿ
ನೆಲೆಸಲಿ. ಬೆಳಕಿನ ಹಬ್ಬ ದೀಪಾವಳಿ ಎಲ್ಲರ
ಬದುಕಿಗೆ ಮಂಗಳ ತರಲಿ."
ಎಂದು ಶುಭ ಹಾರೈಸುವೆ.
ಶುಭಕೋರುವವರು
ಎಚ್.ಎಮ್.ನಾಯಕ
ಕಾಕೋಳ ಜಿಪಂ ಮೀಸಲು ಕ್ಷೇತ್ರದ ಪ್ರಬಲ ಆಕಾಂಕ್ಷಿ
ಹಾಗೂ ಪ್ರಥಮ ದರ್ಜೆ ಗುತ್ತಿಗೆದಾರರು,
ಕಾಕೋಳ ತಾಂಡ(ವೆಂಕಬಾಪುರ)


BIRLA OPEN MINDS
PRESCHOOL | RANEBENNUR
23 STATES | 111+ CITIES | 185+ INSTITUTES
BIRLA OPEN MINDS
PRESCHOOL RANEBENNUR
Pre Nursery Nursery K1 K2
A strong & sure start
+91 84314 67429
#100, Dr. Kadakol Building, Raja Rajeshwari Nagar, 4th Cross,
Near KEB Ganesh Temple, Ranebennur - Karnataka 581115
ದೀಪಾವಳಿ ಹಬ್ಬದ
ಹಾರ್ದಿಕ ಶುಭಾಶಯಗಳು
नमस्तेऽस्तु महामाये श्रीपीठे सुरपूजिते ।
जो महामाया है, सभी वैभव का आधार है,
जो देवताओं द्वारा पूजित है, (महालक्ष्मी) आपको नमन है ।
Happy Diwali!
97 Years of Experience
149 PODAR INTERNATIONAL SCHOOLS
120 PODAR PARTNER SCHOOLS
400 PODAR PRE-SCHOOLS
2,50,000 STUDENTS
8,000 STAFF MEMBERS
DR. KADKOL
PODAR LEARN SCHOOL
India's Most Respected Educational Institute
Grade 1 to 9
8105 333 999
www.podarsmarterschools.com
principal.drkadkolpls@podar.org
Near Syngenta Seed Processing Unit, Asundi,
Ranebennur. Dist-Haveri - 581115.

ಸಮಾಲೋಚನೆ ಸುದ್ದಿ
ಕನ್ನಡ ದಿನ ಪತ್ರಿಕೆ
SAMALOCHANE RANEBENNURSUDDI
Kannada Daily Morning





ಅಡವಿಯ ಮಡಿಲಲಿ ತಾಯ್ತನದ ಅಮೃತಧಾರೆ!

ನನ್ನ ಬಾಲ್ಯದಿಂದಲೂ ಅಡವಿ ನನಗೇನು ಹೊಸದಲ್ಲಾ, ಚಿಕ್ಕವನಿದ್ದಾಗ ನೋಡಿದ ಕಾಡಿಗೂ ಈಗ ನೋಡುತ್ತಿರುವ ಕಾಡಿಗೂ ವಿಶಾಲ ವ್ಯತ್ಯಾಸ ನೋಡಿದೆ. ಅಂದು ನಾನು ನೋಡಿದ ಜೀವ ಪ್ರಪಂಚ ಇಂದು ಕಾಣುತ್ತಿಲ್ಲಾ. ಈ ವ್ಯಾಪ್ತತೆ ಕಾಡಿನ ಒಳಗೆ ಎಲ್ಲೋ ಮರೆಯಾದಂತೆ ನನಗನಿಸುತ್ತಿದೆ.

ಪ್ರತಿ ಬಾರಿ ಕಾಡಿಗೆ ಹೋದಾಗಲೂ ಹೊಸದಾದ ಕೌತುಕ ವಿಚಾರಗಳು ನನ್ನೆದುರು ತೆಗೆದುಕೊಳ್ಳುತ್ತದೆ. ಅಷ್ಟೇ ಅಲ್ಲದೆ ಪ್ರತಿ ಬಾರಿ ಹೊಸದೇನು ಇಲ್ಲಿ ಅಡಗಿರುವಂತೆ ಭಾಸವಾಗುತ್ತದೆ. ಹೀಗೆ ಗಮನಿಸಿದ ಎಷ್ಟೋ ಕೌತುಕ ಸಂಗತಿಗಳ ನಡುವೆ ಇತ್ತೀಚೆಗಷ್ಟೇ ಗಮನಿಸಿದ ಸಂಗತಿಯೊಂದು ನನ್ನ ಸ್ಮೃತಿಯಲ್ಲಿ ಅಚ್ಚಾಗಿದೆ.ನಮ್ಮ ರಾಣೆಬೆನ್ನೂರುಈಗಾಗಲೇಕೃಷ್ಣಮೃಗತವರೂರಾಗಿದೆ.ಅವೇಷ್ಟೋಕೃಷ್ಣಮೃಗಗಳನ್ನುನಾನುಬಹುಹತ್ತಿರದಿಂದ ನೋಡಿದ್ದೇನೆ..ಆದರೆ ತಾಯಿ ಕೃಷ್ಣಮೃಗ ಮರಿಯೊಂದಕ್ಕೆ ಹಾಲುಣಿಸುತ್ತಿರುವ ದೃಶ್ಯ ಇತ್ತೀಚೆಗೆ ನನ್ನ ಕಣ್ಣಿಗೆ ಬಿದ್ದಿತು. ಮೂಕವಿಸ್ಮಿತನಾಗಿ ತಾಯಿಯ ಮಮತೆಯನ್ನು ನೋಡಿ ಬೆರಗಾದೆ. ಮಾತೃ ವಾತ್ಸಲ್ಯ ಎಂದರೆ ಇದೆ ಅಲ್ಲವೇ, ತಾಯಿ ತಾಯ್ತನ ಎಲ್ಲೆಡೆ ಒಂದೆ ಅಲ್ಲವೇ,ಈ ದೃಶ್ಯ ನನ್ನ ಕಳೆದ ಅಷ್ಟು ವರ್ಷಗಳ ಕಾಡಿನ ಅನುಭವಗಳಲ್ಲಿ ಕಾಣಿಸಿರಲಿಲ್ಲಾ. ನಗರದ ಮಾನವನಿಗಿದು ವಿಶೇಷ ಎನಿಸದೇ ಇರಬಹುದು... ಆದರೆ ಕಾಡಿನ ಜಗತ್ತಿನಲ್ಲಿ ಸಂಚರಿಸುವ ನನ್ನಂತವರಿಗೆ ಮರುಭೂಮಿಯಲ್ಲಿನೀರಿನಬುಗ್ಗೆ ಸಿಕ್ಕಷ್ಟು ಸಂತೋಷವಾಗುತ್ತದೆ. ಅರಣ್ಯದ ಹಸಿರು ಮಡಿಲಲ್ಲಿ, ನಿಸರ್ಗದ ನಿಶ್ಶಬ್ದತೆಯ ನಡುವೆ ತಾಯಿ ಜಿಂಕೆಯೊಂದು ತನ್ನ ಪುಟ್ಟ ಮರಿಯ ಹಸಿವು ನೀಗಿಸುತ್ತಿರುವ ಅಪರೂಪದ ದೃಶ್ಯ ಮನಸ್ಸಿಗೆ ಮುದ ನೀಡಿದೆ. ಕಾಡಿನ ಬದುಕಿನ ಸುಂದರ ಕ್ಷಣಗಳಲ್ಲಿ ಒಂದಾದ ಈ ದೃಶ್ಯ ತಾಯಿಯ ಮಮತೆ, ವಾತ್ಸಲ್ಯ ಮತ್ತು ಪ್ರೀತಿಯ ಮಹತ್ವವನ್ನು ಮತ್ತೊಮ್ಮೆ ಸಾರಿದೆ.





ರಾಣೆಬೆನ್ನೂರಿನ ಕೃಷ್ಣಮೃಗ ಅಭಯಾರಣ್ಯದಂತಹ ವನ್ಯಜೀವಿಗಳ ನೆಲೆಯ ಮಹತ್ವವನ್ನು ಇಂತಹ ದೃಶ್ಯಗಳು ಎತ್ತಿ ತೋರಿಸುತ್ತವೆ. ಪ್ರಕೃತಿಯ ಮಡಿಲಲ್ಲಿ ತಾಯಿ ಜಿಂಕೆ ತನ್ನ ಮರಿಯನ್ನು ಹತ್ತಿರಕ್ಕೆ ಕರೆದು–ಕೊಂಡು ಹಾಲುಣಿಸುತ್ತಿರುವ ದೃಶ್ಯ ಕೇವಲ ವನ್ಯಜೀವಿಗಳ ಬದುಕಿನ ಚಿತ್ರಣವಲ್ಲ; ಅದು ತಾಯಿಪ್ರೀತಿಯ ಜೀವಂತ ಪ್ರತಿಬಿಂಬ.

ಮನುಷ್ಯನಬದುಕಿನಲ್ಲಿತಾಯಿಯಮಡಿಲುಮೊದಲಆಶ್ರಯವಾದರೆ,ಕಾಡಿನಪ್ರಾಣಿಗಳಬದುಕಿನಲ್ಲಿಯೂ ತಾಯಿಯ ಮಮತೆಯೇ ಮರಿಗಳ ಬದುಕಿಗೆ ಭದ್ರತೆ. ಮಾತುಗಳಿಲ್ಲದ ಈ ಜೀವಿಗಳ ನಡುವಿನ ಪ್ರೀತಿ, ಕಾಳಜಿ ಮತ್ತು ವಾತ್ಸಲ್ಯ ನೋಡುಗರ ಮನಸ್ಸನ್ನು ಭಾವುಕಗೊಳಿಸುತ್ತವೆ. ತಾಯಿಯ ಪ್ರೀತಿಗೆ ಭಾಷೆಯಿಲ್ಲ, ಮಮತೆಗೆ ಗಡಿಯಿಲ್ಲ ಎಂಬ ಮಾತಿಗೆ ಈ ದೃಶ್ಯವೇ ಸಾಕ್ಷಿ.



ಬೀರಪ್ಪ ಲಮಾಣಿ
ಬರಹಗಾರರು,
ಪರಿಸರ ಪ್ರೇಮಿ
ರಾಣೆಬೆನ್ನೂರು

ವನ್ಯಜೀವಿಗಳ ಬದುಕು ಕಾಡಿನೊಂದಿಗೆ ಬೆಸೆದುಕೊಂಡಿದೆ. ಅರಣ್ಯ ನಾಶ, ಆವಾಸಸ್ಥಾನಗಳ ಕುಗ್ಗುವಿಕೆ ಹಾಗೂ ಮಾನವ ಹಸ್ತಕ್ಷೇಪದಿಂದ ವನ್ಯಜೀವಿಗಳ ಬದುಕು ಸಂಕಷ್ಟಕ್ಕೆ ಸಿಲುಕುತ್ತಿರುವ ಇಂದಿನ ಸಂದರ್ಭದಲ್ಲಿ, ಇಂತಹ ಅಪರೂಪದ ಕ್ಷಣಗಳು ಅರಣ್ಯ ಸಂರಕ್ಷಣೆಯ ಅಗತ್ಯವನ್ನು ನೆನಪಿಸುತ್ತವೆ.

ಕಾಡು ಕೇವಲ ಪ್ರಾಣಿಗಳ ವಾಸಸ್ಥಳವಲ್ಲ; ಅದು ಅನೇಕ ಜೀವಿಗಳ ಬದುಕಿನತೊಟ್ಟಿಲು.ಅರಣ್ಯವನ್ನುಉಳಿಸುವುದು ಎಂದರೆಜೀವಜಗತ್ತಿನ ಮಮತೆಯ ಬಂಧಗಳನ್ನು ಉಳಿಸುವುದೇ ಆಗಿದೆ.

ತಾಯಿ ಜಿಂಕೆ ತನ್ನ ಮರಿಯನ್ನು ಪ್ರೀತಿಯಿಂದ ಹಾಲುಣಿಸುತ್ತಿರುವ ಈ ದೃಶ್ಯ ಪ್ರಕೃತಿಯ ಸೌಂದರ್ಯವನ್ನು ಮಾತ್ರವಲ್ಲ, ತಾಯಿಯ ವಾತ್ಸಲ್ಯದ ಸಾರ್ವತ್ರಿಕತೆಯನ್ನೂ ಸಾರುತ್ತದೆ.

ತಾಯಿಯಮಮತೆಮನುಷ್ಯನಲ್ಲಷ್ಟೇಅಲ್ಲ,ಪ್ರತಿಯೊಂದುಜೀವಿಯಲ್ಲೂ ಜೀವಂತವಾಗಿದೆ ಎಂಬುದನ್ನು ಅಡವಿಯ ಈ ಅಪರೂಪದ ದೃಶ್ಯ ಮನಮುಟ್ಟುವಂತೆ ಸಾರಿದೆ.

ಕರ್ನಾಟಕದಲ್ಲಿ ದೀಪಾವಳಿ ಸಂಭ್ರಮ ಬೆಳಕು, ಸಂತಸದ ಮಹೋತ್ಸವ

ಮೊದಲ ಪುಟದಿಂದ...

ಹಿಂದೂ ಧರ್ಮದ ಸಂಪ್ರದಾಯದಲ್ಲಿ ಒಂದೊಂದು ಆಚರಣೆ ಹಿಂದೆ ಒಂದೊಂದು ಸಂದೇಶ ಇರುತ್ತದೆ. ಹಾಗೆಯೇ ದೀಪಾವಳಿ ಬಲಿಪಾಡ್ಯಮಿ ಆಚರಣೆ ಹಿಂದೆಯೂ ಪೌರಾಣಿಕ ಹಿನ್ನೆಲೆ ಇದೆ. ಉತ್ತರ ಕರ್ನಾಟಕದಲ್ಲಿ ಐದು ದಿನಗಳ ಕಾಲ ದೀಪಾವಳಿ ಹಬ್ಬ ಆಚರಿಸಲಾಗುತ್ತಿದೆ. ದೀಪಾವಳಿ ಅಮಾವಾಸ್ಯೆ ಮರುದಿನ ಆಚರಿಸಲ್ಪಡುವ ಬಲಿಪಾಡ್ಯಮಿ ಹಬ್ಬವೂ ಅನೇಕ ವಿಶೇಷತೆಯಿಂದ ಕೂಡಿದೆ.

ಪಾಂಡವರ ಆರಾಧನೆ: ಸಗಣಿಯಿಂದ ಮಾಡಿರುವ ಆಕೃತಿಗಳನ್ನು ಪಾಂಡವರು ಎಂಬ ಹೆಸರಿನಲ್ಲಿ ಆರಾಧನೆ ಮಾಡಲಾಗುತ್ತದೆ. ರೂಢಿಯಲ್ಲಿ ಹಟ್ಟಿಹಬ್ಬ ಎಂದು ಇದನ್ನು ಕರೆಯುವುದುಂಟು. ದೀಪಾವಳಿ ಅಮಾವಾಸ್ಯೆ ಮರುದಿನ ಕುರಿಗಾಹಿಗಳು ಹಟ್ಟಿಪೂಜೆ ಎಂದು ಆಚರಣೆ ಮಾಡಿದರೆ, ಗ್ರಾಮೀಣ ಭಾಗದಲ್ಲಿ ಪಾಂಡವರ ಹಬ್ಬ ಎಂದು ಆಚರಣೆ ಮಾಡಲಾಗುತ್ತಿದೆ.

ಆಕಳು ಸಗಣಿ ಬಳಸಿ ಆಕೃತಿ ನಿರ್ಮಾಣ: ದೀಪಾವಳಿ ಅಮವಾಸ್ಯೆಯ ಮರುದಿನ ಬಲಿಪಾಡ್ಯಮಿ ದಿನದಂದು ಬೆಳಗ್ಗೆ ಆಕಳಿನ ಸಗಣಿಯನ್ನು ತಂದು ಅದನ್ನು ಮೂರು ಆಕೃತಿಗಳನ್ನಾಗಿ ಮಾಡುತ್ತಾರೆ. ಹಳ್ಳಿಗರು ಇದನ್ನೂ ಪಾಂಡವರು ಎಂದು ಕರೆಯುವರು. ಈ ಆಕಳು, ಸಗಣಿಯ ಆಕೃತಿಗಳಿಗೆ ಹೂಗಳು, ಉತ್ತರಾಣಿ ಕಡ್ಡಿಗಳನ್ನಿಟ್ಟು ಸಿಂಗರಿಸುತ್ತಾರೆ. ಈ ಸಿಂಗರಿಸಿದ ಸಗಣಿ ಆಕೃತಿಗಳನ್ನು ಮನೆಯ ಮುಂದೆ ಹಾಗೂ ಬಾಗಿಲಿಗೆ ಇಟ್ಟು ಪೂಜೆ ಸಲ್ಲಿಸುತ್ತಾರೆ.

ಪೌರಾಣಿಕ ಹಿನ್ನೆಲೆ: ಈ ಬಲಿಪಾಡ್ಯಮಿ ಆಚರಣೆಗೆ ಪೌರಾಣಿಕ ಹಿನ್ನೆಲೆಯೂ ಇದೆ. ಬಲಿಚಕ್ರವರ್ತಿ ದೇವಲೋಕವನ್ನು ಗೆದ್ದುಕೊಂಡ ಮೇಲೆ ದೇವತೆಗಳು ದೇವಲೋಕವನ್ನು ತೊರೆಯಬೇಕಾಯಿತು. ಈ ವಿಷ್ಣು ದೇವನೂ ವಾಮನ ಅವತಾರ ತಾಳಿ ಬಲಿ ಚಕ್ರವರ್ತಿ ಬಳಿ ಬಂದು ತನಗೆ 3 ಹೆಜ್ಜೆ ಇಡಲು ಜಾಗ ನೀಡುವಂತೆ ಕೇಳುತ್ತಾನೆ.

ಒಂದು ಹೆಜ್ಜೆಯಿಂದ ಭೂಲೋಕ, ಇನ್ನೊಂದು ಹೆಜ್ಜೆಯಿಂದ ಆಕಾಶ ಮುಚ್ಚುತ್ತದೆ. ಆಗ ವಾಮನ ಇನ್ನೊಂದು ಹೆಜ್ಜೆ ಎಲ್ಲಿ ಇಡಲಿ ಎಂದು ಕೇಳಿದಾಗ ಬಲಿ ಚಕ್ರವರ್ತಿ ತನ್ನ ತಲೆಯ ಮೇಲೆ ಇಡು ಎಂದು ಕೇಳುತ್ತಾನೆ. ಆಗ ವಾಮನ ಬಲಿ ಚಕ್ರವರ್ತಿಯ ತಲೆಯ ಮೇಲೆ ಪಾದವನ್ನಿಟ್ಟು ಪಾತಾಳಕ್ಕೆ ತಳ್ಳುತ್ತಾನೆ. ಆಗ ಆತನ ಧರ್ಮನಿಷ್ಠೆ ಮೆಚ್ಚಿ ವಾಮನ ಅವತಾರದ ವಿಷ್ಣು ಪಾತಾಳದ ಅಧಿಪತ್ಯ ದಯಪಾಲಿಸುತ್ತಾನೆ. ಹೀಗಾಗಿ, ಬಲಿಪಾಡ್ಯಮಿ ಆಚರಣೆಗೆ ಬಂದಿದೆ.

ದುಷ್ಟ ಶಕ್ತಿ ಸಂಹಾರಕ್ಕೆ ಈ ಪೂಜೆ: ಸಗಣಿ ಗಣೇಶನ ರೂಪ. ಇದನ್ನು ಪೂಜೆ ಮಾಡಿದರೆ ಒಳ್ಳೆಯದು ಎಂಬ ನಂಬಿಕೆಯಿಂದ ಇದನ್ನು ಆಚರಣೆ ಮಾಡಲಾಗುತ್ತದೆ. ಇನ್ನು ದುಷ್ಟಶಕ್ತಿಗಳು ಬಾರದಿರಲಿ, ಮನೆಯಲ್ಲಿ ಸುಖ ಸಮೃದ್ಧಿ ತುಂಬಿರಲಿ ಎಂಬ ಪ್ರಾರ್ಥನೆಯೊಂದಿಗೆ ಈ ಆಚರಣೆಯನ್ನು ಮಾಡಲಾಗುತ್ತದೆ. ಅಲ್ಲದೇ, ದನಕರುಗಳಿಗೂ ಒಳ್ಳೆಯದಾಗಲಿ ಎಂಬ ಆಶಯವೂ ಈ ಆಚರಣೆಯ ಹಿಂದೆ ಇದೆ. ಇನ್ನು ಸಗಣಿಯ ಆಕೃತಿ ಪಾಂಡವರನ್ನು ಪೂಜಿಸಿ ಬಳಿಕ ಅವುಗಳನ್ನು ಮನೆಯ ಮಾಳಿಗೆ ಮೇಲೆ ಇಡುವ ಪರಿಪಾಠವಿದೆ.

ಏನೇ ಆಗಲಿ, ನಮ್ಮ ದೀಪಾವಳಿ ಆಚರಣೆ, ನಮ್ಮ ಹೆಮ್ಮೆ ಎನ್ನುವುದು ಸುಳ್ಳಲ್ಲ. ಒಂದೊಂದು ಆಚರಣೆ ಹಿಂದೆಯೂ ವಿಶೇಷತೆ ಇರೋದು ನಮ್ಮ ನಾಡಿನ ಹೆಮ್ಮೆಯೇ ಸರಿ.

ಬಂಜಾರ ಸಮುದಾಯದಲ್ಲಿ ದೀಪಾವಳಿ ಹಬ್ಬ: ಉತ್ತರ ಕರ್ನಾಟಕದ ಬಂಜಾರ ಸಮುದಾಯವು ಐದು ದಿನ ಕಾಲ ದೀಪಾವಳಿ ಹಬ್ಬವನ್ನು ವಿಶಿಷ್ಟ ರೀತಿಯಾಗಿ ಆಚರಿಸುತ್ತದೆ. ದೀಪಾವಳಿ ಆರಂಭದಿಂದ ಮುಗಿಯುವ ವರೆಗೆ ಬಂಜಾರ ಸಮುದಾಯದವರು ಮನೆಯಿಂದ ದನಕರುಗಳ ಸಗಣಿಯನ್ನ ಹೊರಗೆ ಚೆಲ್ಲುವುದಿಲ್ಲ. ಇದರಲ್ಲಿ ಲಕ್ಷ್ಮಿ ಇರ್ತಾಳೆ ಎಂಬ ನಂಬಿಕೆ ಅವರಲ್ಲಿರುತ್ತೆ. ಒಟ್ಟಾರೆ ಬಂಜಾರ ಜನಾಂಗಕ್ಕೆ ದೀಪಾವಳಿ ಅತಿದೊಡ್ಡ ಹಬ್ಬವಾಗಿದ್ದು, ಹತ್ತು ಹಲವು ವಿಶಿಷ್ಟತೆಯೊಂದಿಗೆ ಹಬ್ಬ ಮುಂದುವರೆಸಿಕೊಂಡು ಬರುತ್ತಿದ್ದಾರೆ.


ನಾಡಿನ ಸಮಸ್ತ ಜನತೆಗೆ ದೀಪಾವಳಿಯ ಹಬ್ಬದ
ಹಾರ್ದಿಕ ಶುಭಾಶಯಗಳು
ದೀಪದಿಂದ ದೀಪ ಹಚ್ಚಬೇಕು ಮಾನವ, ಪ್ರೀತಿಯಿಂದ ಪ್ರೀತಿ ಹಂಚಲು,
ಮನಸ್ಸಿನಿಂದ ಮನಸನು ಬೆಳಗಬೇಕು ಮಾನವ, ಮೇಲು ಕೀಳು ಬೇಧ ನಿಲ್ಲಲು
ದೀಪಾವಳಿ ಹಬ್ಬವು ಎಲ್ಲರ ಬಾಳಲ್ಲಿ ಸುಖ, ಸಂತೋಷ, ಸಮೃದ್ಧಿ ತರಲಿ ಎಂದು ಶುಭ ಹಾರೈಕೆ.
ಶುಭ ಕೋರುವವರು :
ಶ್ರೀ ಸಂತೋಷಕುಮಾರ ಪಾಟೀಲ ಅಭಿಮಾನಿ ಬಳಗ
ರಾಣೇಬೆನ್ನೂರ ವಿಧಾನಸಭಾ ಕ್ಷೇತ್ರ

ಶ್ರೀ ಪ್ರಕಾಶ್ ಕೋಳಿವಾಡ
ಜನಪ್ರಿಯ ಶಾಸಕರು, ರಾಣೆಬೆನ್ನೂರು
ಶ್ರೀ ಆರ್. ಶಂಕರ್
ನಿಕಟಪೂರ್ವ ಸಚಿವರು, ಕರ್ನಾಟಕ ಸರ್ಕಾರ
ಅಜ್ಞಾನ, ಅಂಧಕಾರ ತೊಡೆದು ಜ್ಞಾನದ ದೀಪ ಹಚ್ಚೋಣ.
ದ್ವೇಷ, ಅಸೂಯೆ ಬಿಟ್ಟು ಪ್ರೀತಿಯ ಜ್ಯೋತಿ ಬೆಳಗೋಣ,
ಜಾತಿ, ಧರ್ಮ, ಕುಲ-ಮತ ಎನ್ನದೇ
ಸಂತಸದಿಂದ ಬೆಳಕಿನ ಹಬ್ಬ ಆಚರಿಸೋಣ
ನಾಡಿನ ಸಮಸ್ತ ಬಂಧುಗಳಿಗೆ
ಬೆಳಕಿನ ಹಬ್ಬ
ದೀಪಾವಳಿ ಹಬ್ಬದ
ಶುಭಾಶಯಗಳು
ದೀಪಾವಳಿಯ ಬೆಳಕು
ನಿಮ್ಮ ಬಾಳಲ್ಲಿ ಸುಖ ಶಾಂತಿ ನೆಮ್ಮದಿ ತರಲಿ
ಶುಭಾಶಯಗಳೊಂದಿಗೆ : ಮಂಜಯ್ಯ ಚಾವಡಿ ಸಣ್ಣಸಂಗಾಪುರ
ManjayyaChavadi www.chavadiconsultants.com


ವಿಜಯದ ಸಂಕೇತ
ವಿಜಯದಶಮಿ, ಬೆಳಕಿನ
ಸಂಕೇತ ದೀಪಾವಳಿ.
ಈ ಪವಿತ್ರ ಹಬ್ಬಗಳು
ಪ್ರತಿಯೊಬ್ಬರ ಬದುಕಿನಲ್ಲಿ
ಸುಖ, ಶಾಂತಿ, ಸಮೃದ್ಧಿ
ಹಾಗೂ ಯಶಸ್ಸನ್ನು ತರಲಿ.
ನಾಡಿನ ಜನತೆಯ ಸೇವೆ
ಮಾಡುವ ಸಂಕಲ್ಪಕ್ಕೆ ಮತ್ತಷ್ಟು
ಶಕ್ತಿ ನೀಡಲಿ.
ಶುಭಕೋರುವವರು.
ಮಹೇಶ ಕುಬೇರಪ್ಪ ಕಂಬಳಿ
ಅಧ್ಯಕ್ಷರು, ಪಿ ಎಲ್ ಡಿ ಬ್ಯಾಂಕ್ ರಾಣೆಬೆನ್ನೂರ


ನಾಡಿನ ಜನತೆಗೆ ಹಾಗೂ
ರಾಣೇಬೆನ್ನೂರ ಜನತೆಗೆ
ದಸರಾ ಹಾಗೂ
ದೀಪಾವಳಿ ಹಬ್ಬದ
ಶುಭಾಶಯಗಳು
ಶುಭಕೋರುವವರು.
ಶಶಿಧರ ಚಿತ್ತಣ್ಣನವರ
ಬಿಜೆಪಿ ಯುವ ಮುಖಂಡರು ಹಾಗೂ ಮಾಲೀಕರು
ವೀರಾಂಜನೇಯ ಕಿರಾಣಿ ಅಂಗಡಿ ಪತ್ತೇಪುರ.


ಸಮಾಲೋಚನೆ ಸುದ್ದಿ
ಕನ್ನಡ ದಿನ ಪತ್ರಿಕೆ
SAMALOCHANE RANEBENNURSUDDI
Kannada Daily Morning












ಓದುಗರು, ಜಾಹೀರಾರುದಾರರು ಹಾಗೂ ಪತ್ರಿಕೆಯ ಹಿತೈಷಿಗಳು,
ಮಾರ್ಗದರ್ಶಕರಿಗೆ ದೀಪಾವಳಿ ಹಬ್ಬದ ಹಾರ್ದಿಕ ಶುಭಾಶಯಗಳು.

। ಶುಭ ಕೋರುವವರು

ಸಂಪಾದಕರು, ಸಮಾಲೋಚನೆ ರಾ ಸುದ್ದಿ ರಾಣೆಬೆನ್ನೂರ





















ಮನೆಯ ತಾರಸಿಯ ಮೇಲೆ ನೆಟ್ಟ ಗಿಡ ಹೂ ಬಿಟ್ಟಿದೆ, ನೋಡಲು ನೀನಿಲ್ಲ!

ನಾನು ಆ ಗಿಡವನ್ನು ನೆಟ್ಟಿದ್ದು ಯಾವಾಗ ಗೊತ್ತಾ? ನೀನು ಮೊದಲ ಬಾರಿಗೆ ನನ್ನ ಮನೆಗೆ ಬಂದಿದ್ದ ದಿನ. ತಾರಸಿಯ ಮೂಲೆಯಲ್ಲಿ ಬರಿ ಮಣ್ಣು ಇತ್ತು. ನೀನು ನಗುತ್ತಾ ಹೇಳಿದ್ದೆ, "ಇಲ್ಲಿ ಒಂದು ಗುಲಾಬಿ ಇದ್ದರೆ ಎಷ್ಟು ಚೆಂದ ಇರುತ್ತಿತ್ತು" ಅಂತ. ಆ ಒಂದು ಮಾತಿಗೆ ನಾನು ಮಾರನೇ ದಿನವೇ ರಾಶಿ ಗುಲಾಬಿ ಗಿಡಗಳನ್ನು ನೆಟ್ಟಿದ್ದೆ. ನೀನು ಮತ್ತೆ ಬರುವಾಗ ಅವುಗಳು ಅರಳಿರಲಿ ಅಂತ.

ನೋಡು, ಇವತ್ತು ಅವು ಹೂ ಬಿಟ್ಟಿವೆ. ಮೊದಲ ಹೂ. ಕೆಂಪಗೆ, ನಾಚಿಕೊಂಡು ನಿಂತಿರುವ ನಿನ್ನ ಕೆನ್ನೆಯಂತೆ. ಇವತ್ತು ವಿಕ್ ಆಪ್ ಇತ್ತು. ನಾನು ಬೆಳಿಗ್ಗೆ ಎದ್ದು ತಾರಸಿಗೆ ಹೋಗಿ ಅವುಗಳನ್ನೇ ನೋಡುತ್ತಾ ನಿಂತಿದ್ದೇನೆ. ಕೈಯಲ್ಲಿ ಫೋನ್ ಇದೆ. ನಿನಗೆ ಫೋಟೋ ಕಳಿಸಬೇಕು, ವಿಡಿಯೋ ಕಾಲ್ ಮಾಡಿ ತೋರಿಸಬೇಕು ಅನ್ನಿಸುತ್ತಿದೆ. ಆದರೆ ಕಳೆದ ಒಂದು ವಾರದಿಂದ ನೀನು ನನ್ನ ಮೆಸೇಜ್ ಗಳಿಗೆ "ಹ್ಮ್", "ಬ್ಯುಸಿ ಇದ್ದೀನಿ", "ಹುಷಾರಿಲ್ಲ" ಅಂತಷ್ಟೇ ಉತ್ತರಿಸುತ್ತಿದ್ದೀಯಾ. ಫೋನ್ ಮಾಡಿದರೆ ಕಟ್ ಮಾಡುತ್ತಿದ್ದೀಯಾ. ಈ ಹೂವುಗಳಷ್ಟೇ ನಾನು ಕೂಡ ಒಂಟಿಯಾಗಿದ್ದೇನೆ ಅನಿಸುತ್ತಿದೆ.



ನನಗೆ ಗೊತ್ತು, ನಿನಗೆ ನಾನು ಇಷ್ಟ ಎಂಬುದರಲ್ಲಿ ಯಾವುದೇ ಅನುಮಾನವಿಲ್ಲ. ನಿನ್ನ ಕಣ್ಣುಗಳು ಸುಳ್ಳು ಹೇಳುವುದಿಲ್ಲ. ನನ್ನ ಬೈಕ್ ಸದ್ದು ಕೇಳಿದರೆ ಬಾಲ್ಕನಿಗೆ ಬಂದು ಇಣುಕಿ ನೋಡುವ ನಿನ್ನ ಆತುರ, ನನ್ನ ಹುಡಿ ಜಾಕೆಟ್ ನಲ್ಲಿ ನಿನ್ನ ಪರ್ಫ್ಯೂಮ್ ಸುವಾಸನೆಯನ್ನು ಬಿಟ್ಟು ಹೋಗುವ ನಿನ್ನ ತುಂಟತನ, ನನ್ನೆದುರು ಕೂತಾಗ ಮಾತುಗಳು ಸಿಕ್ಕು ಮೌನವಾಗುವ ನಿನ್ನ ನಾಚಿಕೆ... ಇದೆಲ್ಲವೂ ಪ್ರೀತಿಯಲ್ಲದೆ ಮತ್ತೇನು? ಆದರೆ, ಇತ್ತೀಚೆಗೆ ಏನಾಯಿತು? ಯಾಕೆ ಹೀಗೆ ದೂರವಾಗುತ್ತಿದ್ದೀಯಾ?

ಬಹುಶಃ ನಾನು ನಿನ್ನನ್ನು ತುಂಬಾ ಪ್ರೀತಿಸುತ್ತಿದ್ದೇನೆ ಎಂಬುದು ನಿನಗೆ ಭಾರವಾಗುತ್ತಿದೆಯೇ? ದಿನಕ್ಕೆ ಹತ್ತು ಬಾರಿ ಮೆಸೇಜ್ ಮಾಡುವ ನನ್ನ ಹುಚ್ಚು ಪ್ರೀತಿ ನಿನಗೆ ಉಸಿರುಗಟ್ಟಿಸುತ್ತಿದೆಯೇ? ಅಥವಾ ನಿನ್ನ ಮನೆಯಲ್ಲಿ ಏನಾದರೂ ಹೇಳಿದ್ದಾರೆಯೇ? ನಿನ್ನ ಸ್ನೇಹಿತರು ಏನಾದರೂ ಹೇಳಿದ್ದಾರೆಯೇ?



ಗಿರೀಶ್ ಕುಂಬಾರ

ನೋಡು, ನಾನು ನಿನ್ನನ್ನು ಕಟ್ಟಿ ಹಾಕಲು ಬಯಸುವುದಿಲ್ಲ. ಪಂಜರದ ಹಕ್ಕಿಯಂತೆ ನಿನ್ನನ್ನು ಇಟ್ಟುಕೊಳ್ಳುವ ಆಸೆ ನನಗಿಲ್ಲ. ನಾನು ಬಯಸುವುದು ಬಾನಾಡಿಗಳಂತೆ ಜೊತೆಯಾಗಿ ಹಾರಾಡುವುದು. ನಿನಗೆ ನಿನ್ನದೇ ಆದ ಜಾಗ ಬೇಕು, ನಿನ್ನ ಸಮಯ ಬೇಕು ಎಂದು ನನಗೆ ಅರ್ಥವಾಗುತ್ತದೆ. ಆದರೆ ದೂರವಾಗುವುದು ಅದಕ್ಕೆ ಪರಿಹಾರವಲ್ಲ. ಮಾತನಾಡು. "ನನಗೆ ಈ ರೀತಿ ಇಷ್ಟವಿಲ್ಲ" ಅಂತ ಹೇಳು. ನಾನು ಬದಲಾಗುತ್ತೇನೆ. ನಿನಗಾಗಿ ನಾನು ಆ ತಾರಸಿಯ ಗಿಡದಂತೆ, ದಿನಾ ನೀರು ಹಾಕಿ, ಕಾದು ಬೆಳೆಯಲು ಸಿದ್ಧನಿದ್ದೇನೆ. ಆದರೆ ನೀನು ಕಾರಣವನ್ನೇ ಹೇಳದೆ ಹೀಗೆ ಅವಾಯ್ಡ್ ಮಾಡಿದರೆ, ಆ ಗಿಡ ಬಾಡಿ ಹೋಗುವಂತೆ ನನ್ನ ಮನಸ್ಸು ಕೂಡ ಬಾಡಿ ಹೋಗುತ್ತದೆ.

ನಿನ್ನ ಅವಾಯ್ಡ್ ಮಾಡುವಿಕೆಯ ಪ್ರತಿ ಕ್ಷಣವೂ ನನಗೆ ನರಕ. ರಾತ್ರಿ ನಿದ್ದೆ ಬರುವುದಿಲ್ಲ. ನಿನ್ನ ಇನ್‌ಸ್ಟಾ ಸ್ಟೋರಿಯಲ್ಲಿ ನೀನು ನಗುತ್ತಿರುವುದನ್ನು ನೋಡಿ ಖುಷಿ ಪಡಬೇಕೋ, ಅಥವಾ ಆ ನಗುವಿನಲ್ಲಿ ನಾನಿಲ್ಲವಲ್ಲ ಎಂದು ಬೇಸರಪಡಬೇಕೋ ಗೊತ್ತಾಗುತ್ತಿಲ್ಲ. ಹುಡುಗರ ಪ್ರೀತಿ ತುಂಬಾ ಸರಳವಾದದ್ದು ಕಣೆ. ಅವನಿಗೆ ಒಬ್ಬ ಹುಡುಗಿ ಇಷ್ಟವಾದರೆ, ಅವನ ಪ್ರಪಂಚವೆಲ್ಲಾ ಅವಳೇ ಆಗಿಬಿಡುತ್ತಾಳೆ. ಅವನು ಬೇರೆ ಏನನ್ನೂ ಯೋಚಿಸುವುದಿಲ್ಲ. ನಾನು ಈಗ ಹಾಗಾಗಿದ್ದೇನೆ. ಆಫೀಸಿನಲ್ಲಿ, ಮನೆಯಲ್ಲಿ, ಸ್ನೇಹಿತರ ಜೊತೆ ಇದ್ದರೂ ನನ್ನ ತಲೆಯಲ್ಲಿ ನೀನೇ. ಆ ಗುಲಾಬಿ ಹೂ ಅರಳಿದ ಖುಷಿಯನ್ನು ಹಂಚಿಕೊಳ್ಳಲು ಮೊದಲು ನೆನಪಾಗುವುದು ನೀನೇ. ಒಂದು ವೇಳೆ ನಿನಗೆ ನಿಜವಾಗಿಯೂ ನಾನು ಬೇಡವೆಂದಿದ್ದರೆ, ಅದನ್ನೂ ನೇರವಾಗಿ ಹೇಳು. ನಾನು ಅಳುತ್ತೇನೆ, ಒದ್ದಾಡುತ್ತೇನೆ, ಆದರೆ ಕೊನೆಗೆ ಒಪ್ಪಿಕೊಳ್ಳುತ್ತೇನೆ. ಆದರೆ ಈ ರೀತಿ ಉತ್ತರವಿಲ್ಲದ ಪ್ರಶ್ನೆಯಂತೆ ನೇತು ಹಾಕಬೇಡ. ಇದು ಪ್ರೀತಿಗಿಂತಲೂ ಹೆಚ್ಚು ನೋವು ಕೊಡುತ್ತದೆ.

ಆ ಗಿಡ ಇನ್ನೂ ನಿನ್ನನ್ನು ಕಾಯುತ್ತಿದೆ. ಅದರ ಮೊದಲ ಹೂವನ್ನು ನಾನು ಕೀಳುವುದಿಲ್ಲ. ನೀನು ಬಂದು ನೋಡುವವರೆಗೂ ಅದು ಹಾಗೆಯೇ ಇರಲಿ. ನೀನು ಬಂದು ಅದನ್ನು ನಿನ್ನ ಕೈಯಾರೆ ಮುಟ್ಟಿದಾಗ ಮಾತ್ರ ಆ ಹೂ ಅರಳಿದ್ದು ಸಾರ್ಥಕವಾಗುತ್ತದೆ. ಬರುತ್ತೀಯಾ ತಾನೇ? ಒಂದು ಸಲ, ಕೊನೆಯ ಸಲವಾದರೂ, ಆ ಹೂವನ್ನು ನೋಡಲು ಬಾ. ಆ ಹೂವಿನ ಜೊತೆ ನಾನೂ ಅರಳುತ್ತೇನೆ.!

ಮನದ ಬಾಗಿಲಲ್ಲಿ ಕನ್ನಡ



ಮಧುರ ಕಂಪಿನ ಮುದ್ದು ಕನ್ನಡ
ಅದರಲ್ಲಿದೆ ನಮ್ಮ ಜೀವನಾಡಿಯ ನರ್ತನ,
ಮನದ ಬಾಗಿಲಲ್ಲಿ ನಿಂತಿದೆ ಕನ್ನಡ
ಬರಮಾಡಿಕೋ ಎನ್ನ ಸ್ವಾವಲಂಬಿ ಜೀವನ.
ಅರಿತು ಸಾಗು ನೀ ಮುಂದೆ ಕನ್ನಡ
ಎಂತ ರಸಮಯ ಈ ನಮ್ಮ ಗಾಯನ,
ಕುರಿತು ಓದು ನೀ ಸಾಹಿತ್ಯ ಕನ್ನಡ
ಆಗುವುದು ನಿನ್ನ ಮನ ಪಾವನ.
ಅಮ್ಮ ಕಲಿಸಿದ ನುಡಿ ಅದೇ ಕನ್ನಡ
ಕವಿ ಮಾಡಿದ ಅದರ ವರ್ಣನ,
ಮರೆಯದಿರು ಈ ನಮ್ಮ ಜೀವ ಕನ್ನಡ
ಶ್ರೇಷ್ಠವಾಯಿತು ಆ ಕ್ಷಣ ನಿನ್ನ ಜನನ.
ಸರಳ ಸಂಪಿಗೆ ಈ ಕನ್ನಡ
ಬೀರುವುದು ಮಂದಾರದ ಸುವಾಸನ,
ಕೆಡಸದಿರು ನೀ ಈ ಪುಣ್ಯ ಕನ್ನಡ
ನಾ ಮಾಡುವೆ ನಿನಗೆ ನಮ್ರತೆಯನ.
ಜೈ ಕರ್ನಾಟಕ ಮಾತೆ.....!



ರಚನೆ
ಸೋಮನಾಥ
ರಾಕೋಡ
ರಾಣೆಬೇನ್ನೂರು

ಸಮಾಲೋಚನೆ ಸುದ್ದಿ
SAMALOCHANE RANEBENNURSUDDI
Kannada Daily Morning







SAMALOCHANE RANEBENNURSUDDI KANNADA DAILY MORNING, OWNER, PUBLISHER BY: RAJESHWARI S OLEKAR, PUBLISHED FROM: H.NO, 58 MAIN ROAD, YAKALASAPUR, SUB DISTRICT RANEBENNUR, HAVERI, KARNATAKA-581115, PRINTED AT: VEDAMURTHY S T, GAYATHRI PUBLICATIONS, H.NO, 720, NEKAR COLONY, INDUSTRIAL AREA, HAVERI, KARNATAKA- 581115, EDITOR BY: RAJESHWARI S OLEKAR